ಅವನು ಹೋಗುವುದನ್ನೇ ನೋಡುತ್ತಿದ್ದಳು ಅಂಜು. ಅವಳು ನಿಂತಲ್ಲಿಂದ ಸ್ಪಷ್ಟವಾಗಿ ಕಾಣುತ್ತಿತ್ತು ಜೈಪುರದ ಕೋಟೆಯ ಬತೇರಿ ಮತ್ತು ಅದರ ಮೇಲೆ ಹಾರುತ್ತಿದ್ದ ಧ್ವಜ.

ಒಂದು ಮಡಿಕೆಯ ತುಂಬ ನೀರು, ಮತ್ತೊಂದು ಮಡಿಕೆಯ ತುಂಬ ಮಜ್ಜಿಗೆ ತಂದು ಹೊರಗಿಟ್ಟ ಅಂಜು, ತಾನೂ ಒಂದು ಲೋಟ ಮಜ್ಜಿಗೆ ಕುಡಿದಳು. ಕನ್ನಡಿಗಳನ್ನು ಅಳವಡಿಸುತ್ತಿದ್ದ ಮನಸ್ಸು ಸುಮಾರು ಇಪ್ಪತ್ತೆಂಟು ವರ್ಷಗಳ ಹಿಂದೆ ಓಡಿತು. ಆಗ ಅವಳ ವಯಸ್ಸು ಕೇವಲ ಹನ್ನೆರಡು. ಜಯಪುರದ ಬಳಿಯ ಹಾಥೋಡ್‌ನ ಬಂಜಾರ ಗುಂಪಿನ ಹುಡುಗಿ. ಅವಳೇ ಅಂಜು ಬಾಂಜುರಿ. ನೀರು, ನೆಲೆ ದೊರೆಯುವ ಕಡೆ ವಾಸವಿರುತ್ತಿದ್ದ ಅಲೆಮಾರಿ ಜನಾಂಗ ಅವರದು. ಅವರ ಆಸ್ತಿಯಾದರೂ ಏನು... ಒಂದಿಷ್ಟು ಗುಡಾರದ ಸಾಮಗ್ರಿಗಳು ಮತ್ತು ಒಂಟೆಗಳು. ಅಂಜುವಿನ ತಂದೆಯ ಬಳಿ ನಾಲ್ಕು ಒಂಟೆಗಳಿದ್ದವು. ಯಾರ ಬಳಿ ಹೆಚ್ಚು ಒಂಟೆಗಳಿರುತ್ತವೆಯೋ ಅವನೇ ಶ್ರೀಮಂತ ಅವರ ಪಾಲಿಗೆ. ಆ ನಿಟ್ಟಿನಲ್ಲಿ ಅಂಜುವಿನ ತಂದೆ ಅತ್ಯಂತ ಶ್ರೀಮಂತನಲ್ಲದಿದ್ದರೂ ಇರುವುದರಲ್ಲಿ ಚೆನ್ನಾಗಿದ್ದವನು. ಹಾಥೋಡಿನ ಸುತ್ತಮುತ್ತಲಿದ್ದ ಕುರುಚಲು ಕಾಡುಗಳಲ್ಲಿ ಒಂಟೆ ಮೇಯಿಸುವುದು, ಒಣಗಿದ ಕಟ್ಟಿಗೆ ಆರಿಸುವುದು, ಲಂಗ ಮತ್ತು ಧಾವಣಿಯ ಬಟ್ಟೆಗಳಿಗೆ ಕನ್ನಡಿ ಅಳವಡಿಸುವುದು, ಕಸೂತಿ ಹಾಕುವುದು, ಕಾಡು ಗಿಡಗಳಿಂದ ಹೂಗಳನ್ನು ಆಯ್ದು ಮಾಲೆ ಮಾಡುವುದು... ಮತ್ತು ಅವುಗಳನ್ನು ಹತ್ತಿರದ ಹಳ್ಳಿ, ಮಹಲುಗಳಲ್ಲಿ ಮಾರಾಟ ಮಾಡುವುದು ಹೀಗೆ ಅವರ ಕಸುಬು. ಹನ್ನೆರಡು ವರ್ಷದ ಅಂಜು ಮತ್ತು ಗೆಳತಿಯರು ಹತ್ತಿರದ ಕುರುಚಲು ಕಾಡುಗಳಲ್ಲಿ ಆಡುತ್ತಾ, ಓಡುತ್ತ ಆನಂದವಾಗಿರುತ್ತಿದ್ದರು. ಒಂಟೆ ಹಾಲು ಅವರ ದಿನದ ಆಹಾರದ ಒಂದು ಭಾಗವಾಗಿತ್ತು. ಬಾಜ್ರಾದ ರೊಟ್ಟಿ, ಬದನೆಕಾಯಿಯ ಎಣ್ಣೆಗಾಯಿ, ಹಸಿ ಈರುಳ್ಳಿ, ಒಂದು ಹಿಡಿ ಹಸಿ ಮೆಣಸಿನಕಾಯಿ ಅವರ ಪ್ರತಿನಿತ್ಯದ ಊಟ. ಕೈತುಂಬಾ ದಂತದ ಬಳೆಗಳು, ಕುತ್ತಿಗೆಯ ತುಂಬಾ ಕಾಸಿನ ಮತ್ತು ಶಂಖದ ಸರಗಳು, ತಲೆಯ ಮೇಲೆ ಕುಸುರಿ ಕೆಲಸದ ದಾವಣಿ ಹೊದ್ದು ಓಡಾಡುತ್ತಿದ್ದರು. ಅವರ ಲಂಗಗಳ ನೆರಿಗೆಗಳೇ ವಿಶೇಷ ಆಕರ್ಷಣೆ.

ಅಂಜು, ಅವತ್ತು ಎದ್ದಾಗಲೇ ಹೊತ್ತಾಗಿತ್ತು. ಗೆಳತಿಯರೆಲ್ಲ ಹೋಗಿಬಿಟ್ಟಿರುತ್ತಾರೆ ಎಂದು ಬೇಗ ಬೇಗನೆ ಅಮ್ಮ ಕರೆದಿಟ್ಟ ಒಂಟೆ ಹಾಲು ಕುಡಿದು, ಓಡ್ನಿ ಹೊದ್ದು, ಕೈಯಲ್ಲಿ ಮಣ್ಣಿನ ಬಿಂದಿಗೆ ಹೊತ್ತು ಮರಳುಗಾಡಿನ ನೆಲದ ಮೇಲೆ ಓಡುತ್ತಾ ಹೋಗತೊಡಗಿದಳು. ತಂದೆ ಆಗಲೇ ಒಂಟೆ ಅಟ್ಟಿಕೊಂಡು ಹೋಗಿದ್ದಾನೆ, ಬೆಳಗಿನ ಹತ್ತುಗಂಟೆಗೇ ಈ ಮರಳುಗಾಡಿಗೆ ಮಧ್ಯಾಹ್ನವಾಗಿ ಬಿಡುತ್ತದೆ, ಎಂದುಕೊಳ್ಳುತ್ತಾ ಬಿರ ಬಿರನೆ ಹೋಗುತ್ತಿದ್ದವಳಿಗೆ ಎದುರಿಗೆ ಏನೋ ಅಡ್ಡ ಬಂದು ನಿಂತಂತೆ ಆಯಿತು. ನೋಡಿದರೆ ಬಿಳಿಯ ಕುದುರೆಯ ಮೇಲಿನ ಸವಾರ. ರಾಜ ದಿರಿಸಿನಲ್ಲಿ ಇದ್ದಾನೆ. ಅವನು ಸುಮಾರು ಹದಿನಾರು ವರ್ಷದವನಿರಬಹುದು. ಬಿಳಿ ಬಣ್ಣದ ರಾಜದಿರಿಸಿನಲ್ಲಿ ತಲೆಯ ಮೇಲೆ ಮುಂಡಾಸಿಗೆ ಹಚ್ಚಿದ ಬಂಗಾರದ ಮುದ್ರೆ, ಮೇಲೆ ಕೆಂಬಣ್ಣದ ಪುಕ್ಕ. ಕುತ್ತಿಗೆಯ ತುಂಬಾ ಬಂಗಾರ ಮತ್ತು ಮುತ್ತಿನ ಸರಗಳು... ಅವನ ಮೊಗದಲ್ಲಿ ಕಿರಿದಾಗಿ ಮೂಡುತ್ತಿರುವ ಮೀಸೆ... ಅಂಜು ತಲೆ ತಗ್ಗಿಸಿದಳು. 'ಏಯ್ ಲಡ್ಕಿ... ನನ್ನ ಘೋಡಾಗೆ ಮೇವು ಬೇಕು. ನೀರು ಬೇಕು.' ಮಾತಿನಲ್ಲಿದ್ದ ದರ್ಪ... ನೀನು ತಂದು ಕೊಡು ಅನ್ನುವಂತಿತ್ತು. 'ಇಲ್ಲೇ ಸ್ವಲ್ಪ ದೂರದಲ್ಲಿ ಕೊಳವಿದೆ ಮಹಾರಾಜ. ಅಲ್ಲೇ ಘೋಡಾಗೆ ತಿನಿಸೂ ಸಿಗುತ್ತದೆ' ತಲೆ ತಗ್ಗಿಸಿ ನುಡಿದವಳು ಮುಂದೆ ನಡೆದಳು. ನನ್ನನ್ನು ಹಿಂಬಾಲಿಸು ಎನ್ನುವಂತಿತ್ತು ಅವಳ ನಡಿಗೆ. ಅವನು ಅವಳ ಹಿಂದೆಯೇ ಹೋದ. ಸುಮಾರು ಎರಡು ಕಿ.ಮೀ ದೂರಕ್ಕೆ ಹೋದಾಗ ತಂಪಾದ ಗಾಳಿ ಬೀಸತೊಡಗಿತು. ಅಲ್ಲಿದ್ದ ಕುರುಚಲು ಕಾಡಿನಲ್ಲಿ ನವಿಲಿನ ಗುಂಪುಗಳು, ಜಿಂಕೆಗಳ ಹಿಂಡು... ಇವನು ಕುದುರೆಯಿಂದಿಳಿದು ನಡೆಸಿಕೊಂಡು ಹೊರಟ. ಸ್ವಲ್ಪ ದೂರದಲ್ಲೇ ಸಿಹಿ ನೀರಿನ ಬೃಹತ್ತಾದ ಕೊಳ. ಕುದುರೆಯನ್ನು ಅಲ್ಲಿ ನೀರುಕುಡಿಯಲು ಬಿಟ್ಟ. ತಾನೂ ನೀರು ಕುಡಿದ.